ಬೆಲೆ: ಐದಾಣೆ.

ಮನೆಗೆ ಬಂದ ಮಹಾಬಲಿ

" ಭಾರತೀಸುತ "

ಪ್ರಕಾಶಕರು:
ಮನೋಹರ ಗ್ರಂಥ ಭಂಡಾರ,
ಧಾ ರ ವಾ ಡ .

೧೯೪೮

ರಾಷ್ಟ್ರಬಂಧು ಛಾಪಖಾನೆಯಲ್ಲಿ ಮುದ್ರಿಸಲ್ಪಟ್ಟಿತು.
P I C, S K 49—1000-1-1948

ಮನೆಗೆ ಬಂದ ಮಹಾಬಲಿ

ಬೆಳಕು ಹರಿಯಿತೆಂದರೆ ಓಣ. ಮಲೆಯಾಳಿಗಳ ನಾಡ ಹಬ್ಬವದು. ಮಹಾಬಲಿ ಪಾತಾಳದಿಂದ ಇಳೆಗೈತಂದು ಬಹುಕಾಲದ ಹಿಂದೆ ತಾನು ಅರಸಾಳ್ದ ನಲವಿನಾಗರವನ್ನು ನೋಡಿ ಕಣ್ಣುಗಳನ್ನು ತಣಿಸಿಕೊಳ್ಳುವ ದಿನವದು. ಆ ದಿನ ಜನರ ಎದೆಗಳಲ್ಲಿ ನಲವು ಸಂತಸ ಸಡಗರಗಳ ತರಂಗಗಳು ಉಕ್ಕಿ ಹರಿಯಬೇಕು; ಜನರ ನಗುಮೊಗಗಳನ್ನು ನೋಡಿ, ಪಚ್ಚೆಯುಡೆಗಳನ್ನುಟ್ಟು ನಿಂದಿಹ ಭೂರಮೆಯ ಅಳಕಗಳನ್ನು ಕಂಡು ಮಹಾಬಲಿಯ ಕಣ್ಮನಗಳು ತಣಿಯಬೇಕು! ಬಿಳಿಯ ಪೊಡವೆಗಳನ್ನುಟ್ಟ ಅಳಿಕುಂತಳೆಯರ ಕೊರಳುಗಳಿಂದ ಮಹಾಬಲಿಯ ಸ್ವಾಗತದ ಸವಿಗಾನ ಅಂದು ಬೆಳಗಿನ ಉದಯರಾಗವಾಗಬೇಕು!

ಆದರೆ ಅಂದು ಪಡುವಣ ಕಡಲ್ಕರೆಯ ತೆಂಗು ಕೌಂಗುಗಳ ನಾಡಿನಲ್ಲಿ ಓಣದ ಸಡಗರದ ಸುಳಿವಿಲ್ಲ. ಊರಲ್ಲೆಲ್ಲಾ ನೀರವತೆ. ಮಸಣದ ಭೀಕರ ಸ್ತಬ್ಧತೆಯು ನಾಡಿನಲ್ಲಿ ಹರಡಿದ್ದಿತು. ನಾಡುಗರ ಮೊಗಗಳಲ್ಲಿ ಸಂತೋಷ ಸಂತೃಪ್ತಿಗಳ ಕದಿರುಗಳು ಮಿನುಗುತಿರಲಿಲ್ಲ. ಪ್ರತಿಯೊಂದು ಮೊಗವನ್ನೂ ಚಿಂತೆಯ ಮುಸುಕು ಆವರಿಸಿದ್ದಿತು. ಎರಳೆಗಣ್ಣಿನ ಗಾಡಿ

ಗಾರ್ತಿಯರ ಕೊರಳಿಂದ ಮಂಗಳಗೀತಗಳ ಬದಲು ಶೋಕಾರ್ತಸ್ವನಗಳು ಹೊಮ್ಮುತ್ತಿದ್ದವು; ಅವರ ಎದೆಗಳಿಂದ ಹೊರಸೂಸಿದ ನಿಟ್ಟುಸಿರುಗಳು ಹೊರಗಿನ ವಾಯುವನ್ನು ಬಿಸುಪೇರಿಸುತ್ತಿದ್ದುವು.

ಕೃಷ್ಣಂಕುಟ್ಟಿಯು ತನ್ನ ಚಾಪೆಯ ಮೇಲೊಮ್ಮೆ ಹೊರಳಿದ. ಅವನು ತನ್ನ ಕಣ್ಣುಗಳನ್ನು ಅಗಲಿಸಿದ. ಪಡುವಣದಿಂದ ತೆರೆದ ಕಿಟಕಿಗಳ ಸಂದಿಗಾಗಿ ತಂಗದಿರನ ಹಾಲುಬೆಳಕು ಸುಳಿದು ಬಂದು ಕೋಣೆಯ ಕತ್ತಲೆಯನ್ನು ಇಲ್ಲವಾಗಿಸುತ್ತಿತ್ತು. ತೆಂಗಿನ ಸೋಗೆಗಳಿಂದ, ನೇಂದ್ರಬಾಳೆಯ ಎಲೆಗಳಿಂದ ಹೊಮ್ಮಿದ ತಂಗಾಳಿ ಕೋಣೆಯೊಳಗೆ ಸದ್ದಿಲ್ಲದೆ ನುಸುಳಿ ಬಂದು ಅವನ ಮೈಕೈಗಳನ್ನು ತಡವಿ ದಿನದ ದುಡಿತದಿಂದ ಬಳಲಿದ ಅಂಗಾಂಗಗಳಿಗೆ ಹೊಸ ಹುರುಪನ್ನು ನೀಡಲು ಹವಣಿಸುತ್ತಿದ್ದಿತು.

ಕೃಷ್ಣಂಕುಟ್ಟಿಯ ಪಕ್ಕದಲ್ಲಿ ಇನ್ನೊಂದು ಚಾಪೆಯ ಮೇಲೆ ಅವನ ಕೈವಿಡಿದ ಮಡದಿ ಚಿರುತೆ ಪವಡಿಸಿದ್ದಳು. ಬಿಚ್ಚಿದ ಕೂದಲುಗಳು ಆಕೆಯ ಕೆನ್ನೆಗಳನ್ನು ಮುಸುಕಿದ್ದುವು. ಆಕೆ ತನ್ನ ಎಡದ ತೋಳನ್ನೇ ತಲೆದಿಂಬು ಮಾಡಿಕೊಂಡಿದ್ದಳು. ಆಕೆಯ ಜೀವ ಸವಿನಿದ್ದೆಯ ಬಾಂದಳದಿ ರೆಕ್ಕೆಗಳನ್ನು ಅಗಲ್ಚಿ ಹಾರಾಡುತ್ತಿದ್ದಿತು. ಈ ಜಗದ ಬೇವು ಕುದಿತಗಳ ತೆಕ್ಕೆಗಳನ್ನು ಚಣಕಾಲ ಸಡಲಿಸಿ,–ಶಾಂತಿಯ ಕಡಲಲ್ಲಿ ಅವಳ ಆತ್ಮವು

ತೇಲುತಿದ್ದಿತು. ಆಕೆ ಉಟ್ಟಿದ್ದ ಪೊಡವೆ ಹರಿದುದು; ತೊಟ್ಟ ರವಕೆಯಾದರೂ ಅದೇ ಪರಿಯದು. ಓಣವಾದರೂ ಮನೆಮುಂದಿಗೆ ವಸ್ತ್ರಗಳನ್ನು ಕೊಂಡುಕೊಳ್ಳುವುದು ಕೃಷ್ಣಂ ಕುಟ್ಟಿಗೆ ಸಾಧ್ಯವೆನಿಸಲಿಲ್ಲ. ಅವು ಅವನ ಕೈಗೆ ನಿಲುಕದ ದ್ರಾಕ್ಷಿಯ ಹಣ್ಣುಗಳು!

ಬಲಕ್ಕೆ ಕೃಷ್ಣಂಕುಟ್ಟಿ ತನ್ನ ಕಣ್ಣುಗಳನ್ನು ಹೊರಳಿಸಿದ. ಅವನ ಪಕ್ಕದಲ್ಲಿ ಐದು ವರುಷ ಹರೆಯದ ಬಾಲಕನೊಬ್ಬನು ಪವಡಿಸಿದ್ದ. ಆತನ ಜೀವವನ್ನು ನಿದ್ದೆವೆಣ್ಣು ಸೆರೆಗೈದಿದ್ದಳು. ಎಳೆನಗೆಯ ಮುಗುಳು ಬಾಲಕನ ತುಟಿಗಳ ಮೇಲೆ ಮೂಡಿತ್ತು. ಕನಸಿನಲ್ಲಿ ಆವ ಸೊಗದ ತನಿವಣ್ಣನ್ನು ಉಣುತಲಿದ್ದಿತೋ ಆ ಎಳೆಯ ಜೀವ! ಅವನು ತೊಟ್ಟ ಜುಬ್ಬವಾದರೂ ಹರಿದು ಹಳೆಯದೆನಿಸಿದುದೇ. ಸೊರಗಿ ಕಡ್ಡಿಯಂತಾದ ಕೈಯೊಂದು ತಂದೆಯ ಹೆಗಲ ಮೇಲಿದ್ದಿತು. ಉಸಿರಾಟದ ದನಿಯು ಕೃಷ್ಣಂಕುಟ್ಟಿಯ ಕಿವಿಗಳಲ್ಲಿ ಮಾರ್ದನಿಗೊಳ್ಳುತಿದ್ದಿತು!

ಈಗ ಕೃಷ್ಣಂಕುಟ್ಟಿಯ ನೋಟವು ಕಿಟಕಿಗಳ ಸಂದಿಗಾಗಿ ಹೊರಗೆ ನುಸುಳಿತು. ಎರಡು ಮೂರು ಬೆಳ್ಮುಗಿಲುಗಳನ್ನು ಹೊತ್ತ ಬಾಂದಳವನ್ನು ಅವನ ಕಣ್ಣುಗಳು ನೋಡಿದುವು. ತಾರಕೆಗಳು ಮೇಳೈಸಿದ ಚಂದಿರನು ಅವನ ನೋಟವನ್ನು ಸೆಳೆದನು. ನೇಂದ್ರಬಾಳೆಯ ಎಲೆಗಳನ್ನು ಅಲುಗಿಸಿ

ಬಂದ ತಂಬೆಲರ ತೀಟವು ಅವನನ್ನು ಇರ್ಕುಳಿಗೊಳಿಸಿತು. ಅವನ ಚಿತ್ತದಲ್ಲಿ ಆಲೋಚನೆಯ ತೆರೆಗಳು ಹೊಯ್ದಾಡಿದುವು. "ಇಳೆಯ ಮಾನವರಿಗಿಂತಲೂ ಚಂದಿರನೂ, ಚಿಕ್ಕೆಗಳೂ, ಸೂರ್ಯನೂ ಕರುಣಾಳುಗಳು! ತಂಗಾಳಿಯೂ ಗೆಳೆಯ. ಯುದ್ಧಕಾಲವಾದರೂ ಚಂದಿರನು ಹಾಲುಬೆಳಕ ಹೊನಲು ಹರಿಸುವುದರಲ್ಲಿ ರೇಷನ್ ತಂದಿಲ್ಲ. ಬಾನಿನಲ್ಲಿ ಬೆಳಗುವ ತಾರೆಗಳ ಸಂಖ್ಯೆಯು ಕಡಿಮೆಯಾಗಲಿಲ್ಲ. ತಂಗಾಳಿಯಲ್ಲಿ ಆಯಾಸವನ್ನು ಇಲ್ಲವಾಗಿಸುವ ಪ್ರಮಾಣವು ಕಡಿಮೆಯಾಗಿಲ್ಲ".

ಅವನ ಆಲೋಚನೆಗಳು ಮುಗಿಲಮಂಡಲವನ್ನಿಳಿದು ಮತ್ತೆ ಈ ಇಳೆಯನ್ನು ಸೇರಿದುವು. ದಿನ ಬೆಳಗಾದರೆ,— ಕೋಳಿ ಕೂಗಿದರೆ, ಓಣ. ಮಹಾಬಲಿಯು ತನ್ನ ಮಹಾ ನಾಡಿನ ಜನರ ಬಾಳ್ವೆಗಳನ್ನು ನೋಡಲೋಸುಗ ಬರುವನು. ಹೊಸ ಉಡುಪುಗಳನ್ನುಟ್ಟು—ಆನಂದದಿಂದ ಆ ಮಹಾಪುರುಷನ ಬರವನ್ನು ಆದರಿಸಬೇಕಾದ ದಿನವದು. ಕಿರಿಯರಿಗೆ, ಎಳೆಯರಿಗೆ ಓಣ ಪೊಡವೆಗಳನ್ನು ಉಡುಗೊರೆಯಿತ್ತು ಅವರ ಎದೆದಾವರೆಗಳನ್ನು ಅರಳಿಸಬೇಕಾದ ದಿನವದು. ನೇಂದ್ರ ಬಾಳೆಕಾಯಿ, ಹಪ್ಪಳಗಳನ್ನು ಹುರಿದು, ಪಾಯಸ ಚಿತ್ರಾನ್ನಗಳನ್ನು ಮಾಡಿ ಪ್ರತಿಯೊಬ್ಬರೂ ಹಬ್ಬದೂಟವನ್ನು ಗೆಳೆಯರೊಡನೆ, ಬಂಧುಮಿತ್ರರೊಡನೆ ಉಣಬೇಕು. ಹೊಸ ಅರಿವೆ

ಗಳು ಪೇಟೆಯಲ್ಲಿ ದೊರೆಯಲಿಲ್ಲ. ಹಬ್ಬದೂಟವನ್ನು ಸವಿಯಲು ಪಾಯಸಕ್ಕೆ ಅಕ್ಕಿ ಬೆಲ್ಲಗಳು ಸಿಗಲಿಲ್ಲ. ನೇಂದ್ರಕಾಯಿ ಮರಗೆಣಸುಗಳಿಂದಲೇ ಈ ವರುಷದ ಓಣ ಸಾಗಬೇಕು. 'ಆಸ್ತಿಯನ್ನು ಮಾರಿಯಾದರೂ ಓಣ ಮಾಡು' ಎಂದು ಹಿರಿಯರ ಗಾದೆ. ಮಾರಲು ಆಸ್ತಿಯೂ ಇಲ್ಲ; ಓಣ ಮಾಡುವುದೆಂತು!

ಆಲೋಚನೆಗಳೊಡನೆ ಕೃಷ್ಣಂಕುಟ್ಟಿಗೆ ಜಂಪುಹತ್ತಿತು. ಅವನ ದೇಹದ ಮೇಲೆ ನಿದ್ದೆವೆಣ್ಣು ತನ್ನ ಮಿದುಕೈಗಳನ್ನಾಡಿಸಿದಳು.

* * *

ಚಿರುತೆಯ ದನಿ ಕೃಷ್ಣಂಕುಟ್ಟಿಯನ್ನು ನಿದ್ದೆಯಿಂದೆಚ್ಚರಿಸಿತು. ಅವನು ಮೊಗದ ಮೇಲಿನ ಮುಸುಕನ್ನು ತೆಗೆದು ಮಡದಿಯೆಡೆಗೆ ನೋಟವನ್ನು ಹೊರಳಿಸಿದ. "ಏಕೆ ಕರೆದೆ?" ಎಂಬ ಪ್ರಶ್ನೆ ಅವನ ಕೊರಳಿಂದ ಹೊರಟಿತು.

"ಮೊದಲನೆ ಜಾವದ ಕೋಳಿ ಕೂಗಿತು." ಚಿರುತೆ ಅಂಗೈಗಳಿಂದ ಕಣ್ಣುಗಳನ್ನು ಉಜ್ಜುತ್ತಾ ಉಸುರಿದಳು. "ನಾನೆದ್ದು ಮನೆಯನ್ನು ಸಾರಿಸುವೆ; ಅರಿವೆಗಳನ್ನು ಒಗೆದು ಮಡಿಮಾಡಿ ಮಿಂದುಕೊಂಡು ಬರುವೆ. ಅನಿತರಲ್ಲಿ ನೀವು ಮಾವಿನೆಲೆ ತಂದು ಮನೆಗೊಂದು ತೋರಣಗಟ್ಟಿರಿ."

"ಹಬ್ಬ ಮಾಡದಿದ್ದರೂ ಮನೆಗೊಂದು ತೋರಣ ಬೇಕೆ?"

"ನೀವು ಉಪವಾಸವಿದ್ದುದೇಕೆಂದು ಈ ದಿನಗಳಲ್ಲಿ ಯಾರು ಕೇಳುತ್ತಾರೆ? ಒಳಗಿಲ್ಲದಿದ್ದರೂ, ಹೊರಗಾದರೂ ಇಂದು ಹಬ್ಬವೆಂದು ತೋರಿಸಬೇಡವೆ?"

"ಹೂಂ. ಏನು ಅವಸರ?". ಕೃಷ್ಣಂಕುಟ್ಟಿ ಮರಳಿ ಮುಸುಕು ಹಾಕಿದ.

ತೆಂಗಿನೆಣ್ಣೆಯ ಹಣತೆಯೊಂದನ್ನುರಿಸಿ ಚಿರುತೆ ತನ್ನ ಹಾದಿಕಾಯುತ್ತಿದ್ದ ಮನೆಗೆಲಸಗಳತ್ತ ಹೊರಳಿದಳು.

* * *

ಕದಗಳನ್ನು ತಟ್ಟುವ ಸಪ್ಪಳ ಕನಸುಗಳ ನಾಡಿನಲ್ಲಿ ವಿಹರಿಸುತ್ತಿದ್ದ ಕೃಷ್ಣಂಕುಟ್ಟಿಯನ್ನು ಮರಳಿ ಇಳೆಗೆ ಕರೆದು ಕೊಂಡು ಬಂದಿತು. ಅವನು ಹೊದಿಕೆಯನ್ನು ತೆಗೆದು ಹಾಸಿಗೆಯ ಮೇಲೆ ಎದ್ದು ಕುಳಿತ. "ಈ ಮುಂಜಾನೆ ನನ್ನನ್ನು ಕರೆವರಾರು?" ಎಂಬ ಗೊಣಗು ಅವನ ನಾಲಗೆ ತುದಿಯಿಂದ ಒಸರಿತು. ಅವನು ಎದ್ದು ನಿಂತ. ಕಾಲುಗಳು ಬಾಗಿಲೆಡೆಗೆ ಚಲಿಸಿದುವು. ಇನ್ನೊಂದು ಅರೆಕ್ಷಣದಲ್ಲಿ ಕದಗಳನ್ನು ತೆರೆದುದೂ ಆಯಿತು.

ಮುದುಕನೊಬ್ಬನು ಮನೆಯೊಳಗೆ ಹೆಜ್ಜೆಗಳನ್ನಿರಿಸಿದ. ಅವನ ಹಣೆಯ ಮೇಲೆ ಮೂಡಿದ್ದ ಅಸಂಖ್ಯಾತ ಗೆರೆಗಳು ಅವನು ಹೊತ್ತಿಹ ವರುಷಗಳ ಭಾರವನ್ನು ಅರುಹುತ್ತಿದ್ದುವು. ಮಂಜುಮುಸುಕಿದ ಬೆಟ್ಟದಂತೆ ನರೆತ ಗಡ್ಡವು ಅವನ ಮೊಗ

ನನ್ನು ಮುಸುಕಿತ್ತು. ಕೈಯಲ್ಲೊಂದು ದೊಣ್ಣೆ; ಬಳುಕುತಿಹ ಕೈಕಾಲುಗಳು. ಈ ಮುನ್ನ ಆ ಊರಲ್ಲಿ ಈ ಮುದುಕನನ್ನು ಕೃಷ್ಣಂಕುಟ್ಟಿ ನೋಡಿರಲಿಲ್ಲ. ಕೇವಲ ಅಪರಿಚಿತ ಮೋರೆ ಆತನದು. ಈ ಅಪರಿಚಿತ ಇಂತಹ ಅವೇಳೆಯಲ್ಲಿ ತನ್ನೆಡೆಗೆ ಬಂದುದೇಕೆಂಬ ಸೋಜಿಗದ ಅಲೆಯೊಂದು ಅವನ ಅಂತ ರಂಗದಲ್ಲಿ ಸುಳಿದಿತು. ಆತ ಒಂದು ನಿಮಿಷದನಕ ಮುದುಕ ನನ್ನು ಎವೆಯಿಕ್ಕದೆ ನಿಟ್ಟಿಸಿದ. "ನೀವಾರು?" ಎಂಬ ಉದ್ಗಾ ರವು ಹೊರಟಿತು ಕೃಷ್ಣಂಕುಟ್ಟಿಯ ಕೊರಳಿಂದ.

"ನನ್ನನ್ನು ನಿನಗೆ ಗೊತ್ತಿಲ್ಲವೇ ಮಗು?" ಮೆದುನುಡಿ ಯು ಮಾರುಲಿ ಕೃಷ್ಣಂಕುಟ್ಟಿಯ ಕಿವಿಗಳನ್ನು ಸೇರಿತು. ಆ ರವವು ಕೊಳಲ ಇಂಚರದಂತೆ ಮಿದುವಾದುದು; ಸವಿಯಾ ದುದು.

"ಇಲ್ಲ ಅಜ್ಜ, ನೀವಾರು ಎಂಬುದು ನನಗೆ ತಿಳಿಯದು" ಆದರದ ದನಿಯಲ್ಲಿ ಕೃಷ್ಣಂಕುಟ್ಟಿ ಉಸುರಿದ. "ಬನ್ನಿ, ಕುಳಿತು ಕೊಳ್ಳಿರಿ; ಈ ಬೆಳಗು ಹೊತ್ತಿನಲ್ಲಿ ನನ್ನ ಗುಡಿಸಿಲಿಗೇಕೆ ಬಂದಿರಿ?"

ಕೃಷ್ಣಂಕುಟ್ಟಿ ತೋರಿಸಿದ ಚಾಪೆಯ ಮೇಲೆ ಮುದು ಕನು ಕುಳಿತ. ಅವನ ಕೈದೊಣ್ಣೆಯನ್ನು ಗೋಡೆಗಾನಿಸಿದ. ಅವನ ತುಟಿಗಳ ಮೇಲೆ ಕಿರುನಗೆಯು ಮೆಲುಗಾಳಿ ನರ್ತಿ ಸಿತು. ಅವನು ಹೇಳಿದ: "ನನ್ನ ಮೈಯೊಳಗಿನ ಪ್ರತಿಯೊಂದು

ರಕ್ತಕಣವನ್ನು ಅರಿತಂತೆ ನಿಮ್ಮನ್ನು ಸಾಸು ಬಲ್ಲೆ. ಈ ಹಳೆಯ ಅಜ್ಜನ ಪರಿಚಯವು ನಿಮಗಾರಿಗೂ ಇಲ್ಲವೇ? ಈ ದಿನ ಓಣ. ನನ್ನ ಅಣುಗರನ್ನು ಕಣ್ತುಂಬ ನೋಡಿ, ಅವರ ಸುಖಸಂತೋಷಗಳಿಂದ ನನ್ನ ಎದೆಯನ್ನರಳಿಸಿ, ಅವರ ಬಾಳ್ಕೆಗಳು ಚೆಲು ನಲಿವುಗಳ ಆಗರವೆನಿಸಲೆಂದು ಹರಸಿ ಹೋಗಲೋಸುಗ ಬಂದೆ."

"ಇಲ್ಲ ಅಜ್ಜ, ನಿಮ್ಮ ನೆನಪು ನನಗೆ ಆಗಲೊಲ್ಲದು." ಕೃಷ್ಣಂಕುಟ್ಟಿ ತಲೆಯಲುಗಿಸಿದ.

"ಈಗ ನೋಡು, ನನ್ನನ್ನು ಗುರುತಿಸ ಬಲ್ಲೆಯಾ?" ಸಮುದ್ರಘೋಷದಂತೆ ಗಂಭೀರ ಸ್ವರವೊಂದು ಕೋಣೆಯ ಗೋಡೆಗಳಲ್ಲಿ ಮಾರ್ದನಿಗೊಂಡಿತು.

* * *

ಕೃಷ್ಣಂಕುಟ್ಟಿಮುದುಪನೆಡೆಗೆ ದೃಷ್ಟಿಯನ್ನು ಹೊರಳಿಸಿದ. ಆದರೆ ವೃದ್ಧನು ಅಲ್ಲಿರಲಿಲ್ಲ. ಅವನ ತಾಣದಲ್ಲಿ ಗಂಭೀರಾಕೃತಿಯ ಏಳಡಿ ಎತ್ತರದ ಒಬ್ಬ ಮಹಾಪುರುಷನಿದ್ದನು. ರತ್ನಖಚಿತವಾದ ಕಿರೀಟವೊಂದು ಆತನ ತಲೆಯನ್ನು ಅಲಂಕರಿಸಿದ್ದಿತು. ಚಂದ್ರಬಿಂಬದಿಂದ ಹರಿದುಬರುವ ಹಾಲ್ದದಿರುಗಳಂತೆ ಅವನ ಮುಖದಿಂದ ಬಿಳಿ ಕಿರಣಗಳು ಹೊಮ್ಮುತ್ತಿದ್ದುವು; ಕೋಣೆಯೊಳಗಿನ ಕತ್ತಲೆಯನ್ನು ಇಲ್ಲವಾಗಿಸುತ್ತಿದ್ದುವು; ಗೋಡೆಗೆ ಆನಿಸಿದುದು ಮುದುಪನ ಊರುಗೋಲಾಗಿರದೆ ಬಲ

ಶಾಲಿಯು ತೋಳಿಗೆ ತೊಡವೆನಿಸಿದ ಗದೆಯಾಗಿದ್ದಿತು. ಆ ಮೊಗವನ್ನು ನಿಟ್ಟಿಸುವುದು ಕೃಷ್ಣಂಕುಟ್ಟಿಗೆ ಅಸದಳವೆನಿಸಿತು. ಆತ ತನ್ನ ಮೊಗವನ್ನು ತಗ್ಗಿಸಿದ.

"ಮಗೂ ಈಗ ನನ್ನನ್ನು ಗುರುತಿಸಬಲ್ಲೆಯಾ?" ಸ್ನೇಹಪೂರ್ಣ ಸ್ವರವು ಆ ಮಹಾಪುರುಷನ ತುಟಿಗಳಿಂದ ಹೊರಟಿತು. ದಂತ ಪಂಕ್ತಿಗಳ ಧವಳಕಾಂತಿಯು ಕೋಣೆಯ ನಾಲ್ಕು ಗೋಡೆಗಳಲ್ಲಿ ಪ್ರತಿಬಿಂಬಿಸಿತು.

"ಗುರುತಿಸಿದೆ; ಅಜ್ಜ, ನಿನ್ನನ್ನು ಗುರುತಿಸಿದೆ." ಕೃಷ್ಣಂಕುಟ್ಟಿಯ ತುಟಿಗಳು ಆ ಭವ್ಯ ಪುರುಷನ ಪಾದಗಳನ್ನು ಮುತ್ತಿಟ್ಟವು. "ವರುಷಕ್ಕೊಮ್ಮೆ ನಿನ್ನ ನಾಡಿನ ಜನರನ್ನು ನೋಡಲೋಸುಗ ಇಳೆಗೆ ಐತಂದ ಬಲಿಚಕ್ರವರ್ತಿಯು ನೀನು! ಈ ದಿನ ಓಣ. ಬಡವನ ಮನೆಗೆ ಬಂದ ಭಾಗೀರಥಿಯಂತೆ ನಮ್ಮ ಗುಡಿಸಲಿಗೆ ನೀನು ಬಂದಿರುವೆ."

"ಏಳು ಮಗು ಏಳು!" ಬಲಿಚಕ್ರವರ್ತಿಯು ತನ್ನ ಪಾದಗಳ ಮೇಲೆ ಹೊರಳುತ್ತಿದ್ದ ಕೃಷ್ಣಂಕುಟ್ಟಿಯನ್ನು ಹಿಡಿದೆತ್ತಿದ. ಆತನ ಕಡೆಗಣ್ಣುಗಳಿಂದ ಉದುರಿದ ಕಂಬನಿಗಳೆರಡು ಕೃಷ್ಣಂಕುಟ್ಟಿಯ ಮೈಮೇಲೆ ಬಿದ್ದು ಅವನ ಮನದಳಲನ್ನು ತೊಳೆದು ಪುನೀತಗೊಳಿಸಿದುವು.

"ನಮ್ಮೆಲ್ಲರ ಬಗೆಯ ಬೆಳಕೇ! ಇಂದು ಈ ಬೆಳಗಿನಲ್ಲಿ ನೀನು ನಮ್ಮ ಗುಡಿಸಿಲಿಗೆ ಬಂದೆ. ಮನೆ ಬರಿನು. ಆವ ಪರಿಯಲ್ಲಿ ನಿನ್ನನ್ನು ನಾನು ಆದರಿಸಲಿ."

"ನಿನ್ನ ಸುದ್ದಿಗಳೇ ನನ್ನ ಆದರೋಪಚಾರಗಳಿಗೆ ಉಚಿತ ಸಾಮಗ್ರಿಗಳು. ತಿಳಿನೀರಿನ ಬುಗ್ಗೆಗಳನ್ನು ಅರಸುತ್ತಾ ನಾನು ಇಲ್ಲಿಯ ತನಕ ಐತಂದೆ. ಆದರೆ ಮಗೂ, ಅಂತಹ ಚಿಲುಮೆಗಳು ವಿರಳ. ಪ್ರತಿಯೊಬ್ಬರೂ ತಮ್ಮ ಎದೆಗಳ ಸುತ್ತಲೂ ಮುಳ್ಳು ಬೇಲಿಗಳನ್ನು ಕಟ್ಟಿಕೊಳ್ಳುತ್ತಾರೆ; ತಿಳಿಮನದವರು ಬಡತನದ ಯಮಯಾತನೆಗಳ ತೆಕ್ಕೆಗೊಳಗಾಗಿದ್ದಾರೆ!"

"ಅಹುದು. ನೀನು ಇಳೆಯನ್ನು ಬಿಟ್ಟು ಅಗಲಿದ ಅನಂತರ ಇದು ಬಹು ಮಾರ್ಪುಗೊಂಡಿದೆ."

"ನಿಜ." ಬಲಿಚಕ್ರವರ್ತಿಯ ಎದೆಯಿಂದ ಬಿಸಿಯುಸಿರೊಂದು ಹೊರಟಿತು. "ಮನುಷ್ಯನು ದೇವತ್ವದ ಗದ್ದುಗೆಯನ್ನೇರಬೇಕೆಂಬುದು ನನ್ನ ಕನಸಾಗಿದ್ದಿತು. ಆದರೆ ಇಂದು ಆತ ಮಿಗಗಳ ಮೆಟ್ಟಲಿಗೆ ಕೆಳಗುರುಳುತಿದ್ದಾನೆ."

* * *

"ಮಗೂ, ಇಂದು ಓಣ. ನನ್ನ ನಾಡಿನಲ್ಲಿ,–ಅಂದು ನಾನು ರಚಿಸಿದ್ದ ಉದ್ಯಾನದಲ್ಲಿ ವರುಷಕ್ಕೊಮ್ಮೆ ಸಂಚರಿಸುವೆನೆಂದು ವಾಮನನಿಗೆ ಮಾತುಗೊಟ್ಟ ಮೂರುದಿನಗಳಲ್ಲಿ ಮೊದಲನೆಯ ಹಗಲಿಂದು. ಪ್ರತಿ ವರುಷವೂ ಪಾತಾಳದಿಂದ ನಾನು ಬರುತಿದ್ದೇನೆ. ನಾಡಿನ ಉದ್ದಗಲಕ್ಕೂ ಸಂಚರಿಸಿ,– ನನ್ನ ನಾಡಿನ ಸೊಬಗು ಸೌಂದರ್ಯಗಳನ್ನು ನಿಟ್ಟಿಸುತಿದ್ದೇನೆ. ಹೊಸ ಉಡುಪುಗಳನ್ನುಟ್ಟು, ಹಬ್ಬದೂಟಗಳನ್ನುಂಡು ನಲಿ

ಯುವ ಮುಂದಿಯನ್ನು ನೋಡಿ ನನ್ನ ಕಣ್ಣುಗಳಿಂದ ಆನಂದ ಬಾಷ್ಪವನ್ನುಸುರಿಸಿದ್ದೇನೆ. ಅಂತೆಯೇ ಈ ಸಲವೂ ಈ ನಾಡಿಗೆ ಐತಂದೆ. ಕನ್ಯಾಕುಮಾರಿಯಿಂದ ಇಲ್ಲಿಯ ವರೆಗಿನ ನಾಡಿನಲ್ಲಿ ಸಂಚರಿಸಿದೆ. ತೆಂಕಲಿನ ಕಡಲಿನಲ್ಲಿ ಅಲೆಗಳು ತಮ್ಮ ಕ್ರಮ ವನ್ನು ಮೀರಿ ಉಕ್ಕಿ ಬರುತ್ತಿದ್ದುವು. ಅಲೆಗಳ ಮೊರೆತಗಳು ಕಿವಿಗಳನ್ನು ಗಡಚಿಕ್ಕುತ್ತಿದ್ದುವು; ಹಾಗೆಯೇ ತೆಂಗುಗಳ ಸಾ ಲನ್ನು ಹಿಡಿದು ಮುಂದೆ ಹೆಜ್ಜೆಗಳನ್ನು ಹಾಕಿದೆ. ವಾತಾವರ ಣವು ಜನತೆಯ ಎದೆಗಳಿಂದ ಹೊಮ್ಮಿದ ನಿಟ್ಟುಸಿರುಗಳಿಂದ ಬಿಸುಪೇರಿದುದು. ಹೆಂಗುಸರ, ಹಸುಳೆಗಳ, ದೀನದರಿದ್ರರ ಕೊರಳುಗಳಿಂದ ಹೊರಟ ಶೋಕೋದ್ಗಾರಗಳು ತಾರೆಗಳ ನಾ ಡಿನಲ್ಲಿ ಮಾರುಲಿಗೊಡುತ್ತಲಿದ್ದುವು. ಎಲ್ಲಿ ನೋಡಿದರೂ ಕ್ಷೋಭೆ; ಅಶಾಂತತೆ! ಮನೆಯಿಂದ ಮಡದಿಯನ್ನಟ್ಟಿದ ಗಂಡನನ್ನು ಕಂಡೆ. ಮಾತುಬಾರದ ಹಸುಳೆಯನ್ನು ಬೀದಿ ಯಲ್ಲಿ ತೊರೆದ ತಾಯಿಯನ್ನು ನನ್ನ ಕಣ್ಣುಗಳು ನೋಡಿ ದುವು. ಮುದಿ ತಾಯಿ ತಂದೆಯರ ಕೈಗಳಿಗೆ ಚಿಪ್ಪುಗಳನ್ನಿತ್ತ ಮಕ್ಕಳು ಇದ್ದರು. ಇಳೆ ಕ್ರಮಗೆಟ್ಟು—ನರಕವಾದ ದಾರುಣ ದೃಶ್ಯಗಳೇ ನಾಡಿನ ಉದ್ದಗಲಕ್ಕೂ ತೋರಿದುವು. ಎಲ್ಲಿಯೂ ಒಂದು ಸಂತಸದ ನುಡಿಯಿಲ್ಲ; ಆನಂದದಿಂದ ಹೊಮ್ಮಿದ ಉದ್ಗಾರವಿಲ್ಲ; ಒಲವಿನ ಇನಿ ನುಡಿಯಿಲ್ಲ. ಒಂದೇ ಒಂದು ಮೊಳಗು ಭೂಮಿ ಆಕಾಶಗಳಲ್ಲಿ ಮುಸಗುತ್ತಿದ್ದಿತು. "ಹಸಿವು,

ಹಸಿವು!! ಎಂಬುದೇ ನೆಲದಿಂದೆದ್ದು ಬಾನು ಬಿರಿವಂತೆ ಮೊಳಗುತ್ತಿದ್ದ ಶೋಕಾರ್ತರವವು!"

"ಅಹುದು. ಹಸಿವೆಯಿಂದ ಜನ ಕಂಗೆಡುತ್ತಲಿದೆ." ಕೃಷ್ಣಂಕುಟ್ಟಿ ಮಾರ್ನುಡಿದ.

"ನೆಲದಾಯಿ ಕಾರುಣ್ಯಮಯಿ. ತಾನು ನೇಸರ ಬಿಸಿಲನ್ನುಂಡು ಸೊರಗಿ ಬಿರುಬಾದರೂ, ಮಳೆಗಾಳಿಗಳ ಹೊಡೆತಕ್ಕೆ ಸಿಲುಕಿ ನವೆದರೂ ತೊರೆಗಳು ಉಕ್ಕಿಬಂದು ಹೊನಲಾಗಿ ಹರಿದು ಆಕೆಯನ್ನು ನಾದಿದರೂ, ಆ ತಾಯಿ ತನ್ನ ಮುದ್ದು ಮಕ್ಕಳನ್ನು ಮರೆಯುವುದಿಲ್ಲ; ಅವರ ಉಣಿಸು ತಿನಸುಗಳಿಗೆ ಕೊರತೆಯನ್ನುಂಟುಮಾಡುವುದಿಲ್ಲ. ಆಕೆ ತನ್ನ ಅಣುಗರಿಗೆ ಅಗತ್ಯವೆನಿಸಿದ ದವಸ ಧಾನ್ಯಗಳನ್ನು ಒದವಿಸುತ್ತಾಳೆ."

"ನೆಲದವ್ವನ ನೇಹವು ಕೊನೆಯಿಲ್ಲದುದು." ಕೃಷ್ಣಂಕುಟ್ಟಿ ನುಡಿದ- "ಆದರೆ ಮಾಡುವುದೇನು? ಆಕೆಯ ಮಕ್ಕಳು ಮನುಷ್ಯರಾಗಿರದೆ ನರಿ ತೋಳಗಳಾಗಿರುತ್ತಾರೆ. ಅಜ್ಜ, ನಿನ್ನ ಕಾಲದಲ್ಲಿದ್ದಂತೆ ಈಗಿಲ್ಲ; ಬದಲಾಯಿಸಿದೆ. ಇಂದು ಬಲವುಳ್ಳವರಿಗೆ ಕೂಳಿದೆ; ಬಲಹೀನರಿಗೆ ಊಳಿಗವಿದೆ. ಉಂಡುತಿಂದು ತೇಗಿದವರಿಗೆ ತಮ್ಮ ಆಹಾರವನ್ನು ಜೀರ್ಣಿಸಲು ಯುದ್ಧವೆಂಬ ಕಣಲಾಟವಿದೆ. ಆಹಾರವಿಲ್ಲದೆ ಸೊರಗಿ ಕಡ್ಡಿಯಂತಾದ ಊಳಿಗದವರು ಈ ಕಣಲಾಟದಲ್ಲಿ ಉಪಯೋಗಿಸಲಿಪ ಕಟ್ಟಿಗೆ ತುಂಡುಗಳಾಗುತ್ತಾರೆ. ಅಲ್ಲಿ

ದೂರದಲ್ಲೊಂದೆಡೆ ಯುದ್ಧವೆಂಬ ಕಿಚ್ಚು ದಿವವನ್ನು ಸೀಳು ವಂತೆ ಜ್ವಲಿಸುತ್ತದೆ. ಅದು ಇಳೆಯ ಸಂಪತ್ತುಗಳನ್ನೂ ಮಾನ ವನ ಸರ್ವ ವಿಸಕಗಳನ್ನೂ ಆಹುತಿಗೊಳ್ಳುತ್ತಲಿದೆ. ಇಲ್ಲಿ 'ಹಸಿವು' ಎಂಬ ಮೂರಕ್ಷರಗಳ ದೆವ್ವವು ಮುಂದಿಯ ಮನೆ ಮನೆಗಳಿಗೆ ಸುಗ್ಗಿ ಕಣಲಾಟವನ್ನು ಎಸಗುತ್ತಲಿದೆ."

"ಯುದ್ಧವೆಂಬ ಮಹಾರೋಗ ಇನ್ನೂ ಅಳಿದಿಲ್ಲವೆ"? ಬಲಿಯು ಕಣ್ಣುಗಳಿಂದ ಆಲೋಚನೆಯ ಕಿಡಿಯೊಂದು ಸಿಡಿ ಯಿತು. "ಆ ಕಾಹಿಲೆಯನ್ನು ಇಲ್ಲವಾಗಿಸಲು ನನ್ನ ಜೀವನ ದಲ್ಲಿ ಹೆಣಗಿದೆ. ನನ್ನ ಅಂಕೆಗೊಳಗಾಗಿದ್ದ ಇಳೆಯಿಂದ ಆ ಹೆಸರನ್ನು ತೊಡೆದು ಹಾಕಿದ್ದೆ. ನನ್ನ ನಾಡಿನಲ್ಲಿ 'ಯುದ್ಧ, ಹಸಿವು' ಎಂಬೆರಡು ರೋಗಗಳಿರಲಿಲ್ಲ."

"ಇಂದಿನ ಪೊಡವಿಯಲ್ಲಿ ಆ ಎರಡು ರೋಗಗಳಲ್ಲದೆ ಬೇರೆ ಇನ್ನಾವುದೂ ಉಳಿದಿಲ್ಲ." ಕೃಷ್ಣಂಕುಟ್ಟಿ ನಿಟ್ಟುಸಿರೊಂ ದನ್ನು ಬಿಟ್ಟ.

* * *

"ಅಜ್ಜ, ಪ್ರಜೆಗಳನ್ನು ನೀನು ಮಕ್ಕಳಂತೆ ಪ್ರೀತಿಸು ತ್ತಿದ್ದೆಯಲ್ಲ; ಅವರ ಏಳಿಗೆಯು ಸಲುವಾಗಿ ಹಗಲು ರಾತ್ರಿ ಗಳೆನ್ನದೆ ನೀನು ದುಡಿಯುತಿದ್ದೆಯಲ್ಲ. ಆದರೂ ಬಿಡುಗಣ್ಣ ರಿಗೆ ಏಕೆ ನಿನ್ನ ಇರವು ಸಹನವಾಗಲಿಲ್ಲ. ನೀನು ಅವರ ರಾಜ್ಯವನ್ನು ಅಪಹರಿಸಲು ಯತ್ನಿಸಿದೆಯಂತಲ್ಲ!" ಕೃಷ್ಣಂ ಕುಟ್ಟಿಯು ಆ ಪುರಾತನ ಪುರುಷನ ಮೊಗವನ್ನು ನಿಟ್ಟಿಸಿದ.

“ಸುಳ್ಳು. ನಾನು ದೇವತೆಗಳ ರಾಜ್ಯವನ್ನು ಸೂರೆಗೈಯಲು ಹವಣಿಸಿದೆನೇ?” ಬಲಿಯ ಕಣ್ಣುಗಳು ವಿಸ್ಮಯದ ಕಿಡಿಗಳನ್ನು ಕಾರಿದುವು. “ಬಿಡುಗಣ್ಣರ ಸ್ವರ್ಗದಿಂದ ನನಗೆ ಆಗಬೇಕಾದುದೇನು?”

“ಅಜ್ಜ,” ಕೃಷ್ಣಂಕುಟ್ಟಿ ವಿನೀತ ಸ್ವರದಲ್ಲಿ ಉಸುರಿದ. “ನಮ್ಮ ಪುರಾಣಗಳು, ಭಾಗವತ ಮೊದಲಾದುವು ನೀನು ದೇವತೆಗಳ ನಾಡಿಗೆ ದಾಳಿಯಿಕ್ಕಿ ಸೂರೆಗೈದೆ ಎಂದು ಉಸುರುತ್ತಿವೆ. ತನ್ನ ನಚ್ಚಿನ ದಿವಿಜರನ್ನು ಕಾಪಿಡಲು ವಿಷ್ಣುವು ವಾಮನಾವತಾರವನ್ನು ತಳೆದು, ಪೊಡವಿಯನ್ನು ನಿನ್ನಿಂದ ಪಡೆದನಂತೆ!”

“ಎಂತಹ ಕಟ್ಟುಕತೆಗಳನ್ನು ನಿರ್ಮಿಸಿದರು ಈ ದೇವತೆಗಳು ಮತ್ತು ಅವರ ಕಿಂಕರರಾದ ಯಾಜ್ಞಕರು! ದೇವತೆಗಳ ನಾಡನ್ನು ಸೂರೆಗೈದು ಸಾಮ್ರಾಜ್ಯವನ್ನು ಕಟ್ಟಬೇಕೆಂಬ ಆಲೋಚನೆಯು ನನ್ನ ಕನಸಿನಲ್ಲಿಯೂ ಇರಲಿಲ್ಲ. ಸ್ವರ್ಗವನ್ನು ಇಳೆಯ ಮಟ್ಟಕ್ಕೆ ಇಳಿಸಲು ನಾನು ಎಣಿಸಿರಲಿಲ್ಲ. ಇಳೆಯನ್ನು ಸ್ವರ್ಗವಾಗಿಸಲು,–ಮಾನವನನ್ನು ದೇವತ್ವದ ಗದ್ದುಗೆಯ ಮೇಲೇರಿಸಲು ನಾನು ಹವಣಿಸಿದೆ; ದಿವಿಜರ ನೆಗಳ್ತೆಯನ್ನೂ ಬೀಳುಗಳನ್ನೂ ನಾನು ಅರಿತಂತೆ, ತವಸಿಗಳೂ ಸಹ ಅರಿತಿರರು. ಆದುದರಿಂದ ಸ್ವರ್ಗಸುಖದ ಸಲುವಾಗಿ ನನ್ನ ನಾಲಗೆಯಲ್ಲಿ ನೀರೂರಲಿಲ್ಲ.”

“ಏಕೆ, ಸಾವು ಮುಪ್ಪುಗಳಿಲ್ಲದ, ಜರೆ ನರೆಗಳ ಬಾಧೆ

ಯಿಲ್ಲದ, ಹಸಿವು ತೃಷೆಗಳ ಪೀಡನೆಯಿಲ್ಲದ ಸ್ವರ್ಗದ ಬಾಳ್ಕೆ ಸೊಗಸಿನಾಗರವಲ್ಲವೇ?" ವಿಸ್ಮಯದಿಂದ ಕೃಷ್ಣಂಕುಟ್ಟಿಯು ತಾರಗೆಗಳಂತೆ ಹೊಳೆಯುತಿದ್ದ ಮಹಾಬಲಿಯ ಕಣ್ಣುಗಳನ್ನು ನೋಡಿದ.

"ಹಸಿವು ತೃಷೆಗಳು, ಸಾವು ಮುಪ್ಪುಗಳು, ನಿಸರ್ಗವು ಮಾನವನಿಗೆ ನೀಡಿದ ಶಾಪಗಳಲ್ಲ. ನಿಸರ್ಗವು ತನ್ನ ನಚ್ಚಿನಣುಗರಿಗೆ ಮಮತೆಯಿಂದಿತ್ತ ಅನುಗ್ರಹಗಳವು !"

"ಸಾವು ಮುಪ್ಪುಗಳು, ಹಸಿವು ನೀರಡಿಕೆಗಳು ಮಾನವನಿಗೆ ಸೃಷ್ಟಿಯೊಲಿದಿತ್ತ ಅನುಗ್ರಹಗಳೇ !"

"ಅಹುದು." ನದಿಯ ನಿರ್ಘೋಷದಂತೆ ಗಂಭೀರ ಧ್ವನಿ ಆ ಮಹಾಪುರುಷನ ಕೊರಳಿಂದ ಹೊಮ್ಮಿತು. "ಆದರೆ ಮನುಷ್ಯನು ದೈವವಿತ್ತ ಎರಡು ಅನುಗ್ರಹಗಳನ್ನು ಶಾಪಗಳನ್ನಾಗಿ ಮಾಡಿಕೊಂಡಿದ್ದಾನೆ. ಈ ತಿಳಿಗೇಡಿತನವನ್ನು ಆತನು ಅರಿತುಕೊಂಡುದೇ ಆದರೆ ಅವನು ಸಗ್ಗದ ಮೆಟ್ಟಲಿಗೆ ಪೊಡವಿಯನ್ನೇರಿಸಬಲ್ಲ. ಸಾವು ಮುಪ್ಪುಗಳು ಜೀವನದ ಹೆಗ್ಗುರುತುಗಳು. ಹಣ್ಣು ಕಳಿತ ಮೇಲೆ ಗಿಡದ ಮೇಲೆ ನಿಲ್ಲದು. ಅದು ಕೆಳಗುರುಳಿ ಹೊಸ ತಳಿರು ಮುಗುಳುಗಳಿಗೆ, ಅಲರು ಪೀಚುಗಳಿಗೆ ಎಡೆಯನ್ನು ಮಾಡಿಕೊಡುತ್ತದೆ. ಹೊಸ ತನಿವಣ್ಣುಗಳು ಜನದ ನಾಲಗೆಯ ಸವಿಯನ್ನು ಕೊನರಿಸುತ್ತವೆ. ಅಂತೆಯೇ ಮಾನವನು ತನ್ನ ಬಾಳ್ಕೆಯಲ್ಲಿ ಹಲವು ಕಾರ್ಯ

ಗಳನ್ನೆಸಗಿ, ತನ್ನ ಅನುಭವ ಬುದ್ಧಿಗಳ ಬೊಕ್ಕಸವನ್ನು ಮುಂದಿನ ಪೀಳಿಗೆಗೊಪ್ಪಿಸಿ, ಸಾವಿನ ಮಡಿಲಲ್ಲಿ ವಿಶ್ರಾಂತಿಯನ್ನೈದುತ್ತಾನೆ. ಮುಂದಿನ ತಲೆಮಾರು ನವೋತ್ಸಾಹದಿಂದ, ಎಳೆತನದ ಹುರುಪಿನಿಂದ ಮುನ್ನಡೆಯುತ್ತದೆ. ಈ ಪರಿ ಕಾಲಾಂತರದಲ್ಲಿ ಮಾನವನ ಬುದ್ಧಿ ಆಗಸದಷ್ಟು ವಿಶಾಲವನ್ನೈದುತ್ತದೆ; ಕಡಲಿನಂತೆ ಅಪಾರ ಅನುಭವಗಳ ಆಗರವೆನಿಸುತ್ತದೆ. ದೇಹವಳಿದರೂ ಮಾನವನು ತನ್ನ ಎಸಕಗಳಿಂದ ಅಜರಾಮರನಾಗಿ ಬಾಳುತ್ತಾನೆ. ಈ ಸಾಹಸದ ಎಸಕವು ಸ್ವರ್ಗದಾಳುಗಳಿಗೆ ನಿಲುಕದ ಹಣ್ಣು. ಮುಪ್ಪು ಸಾವುಗಳು ಅವರಿಗಿಲ್ಲದುದರಿಂದ ಹಳೆಯವು ಇಲ್ಲವಾಗಿ, ಹೊಸ ಬಾಳ್ಕೆಗಳಿಗೆ ಅವಕಾಶವಿಲ್ಲ. ಸಗ್ಗಿಗರಿಗೆ ಮುಪ್ಪು ಅಡಸದು. ಆದರೆ ಅದರೊಡನೆ ಅವರ ಬುದ್ಧಿಯೂ ಬಲಿತು ಪರಿಪಕ್ವವೆನಿಸದು. ಕಳಿವ ಮುನ್ನ ಮರದಿಂದ ಕಿತ್ತ ಹೀಚುಗಾಯಿಯಂತೆ,— ಅವರ ಬುದ್ಧಿ ಭಾವನೆಗಳು ವಿಷಯವಾಸನೆಗಳ ಹುಳಿರಸದಿಂದ ಕೂಡಿದವು. ಸಂಕುಚಿತವೆನಿಸಿದ ಬಯಕೆಗಳ ಕಣಿವೆಯನ್ನು ದಾಟಿ, ವಿಶಾಲತೆಯ ಕಡೆಗೆ ಹರಿಯವು ಅವರ ಕಂಗಳು. ಹಸಿವು ತೃಷೆಗಳು ಮನುಷ್ಯನನ್ನು ಉದ್ಯೋಗಕ್ಕೆ ಹಚ್ಚುತ್ತವೆ. ಅವನು ತನ್ನ ಹಸಿವೆಯನ್ನು ತಣಿಸಲೋಸುಗ ನೀರಡಿಕೆಯನ್ನು ಇಲ್ಲವಾಗಿಸಲೋಸುಗ, ನಿರಂತರ ದುಡಿಯುತ್ತಾನೆ. ದುಡಿಮೆಯು ಅವನ ಬುದ್ಧಿಯನ್ನು ಕುದುರಿಸುತ್ತದೆ;

ಅವನ ವಿಚಾರಶಕ್ತಿಯು ಅಭಿವೃದ್ಧಿಯನ್ನೈದುತ್ತದೆ. ಸಾವು ಹಸಿವೆಗಳು "ತಾನು, ತನ್ನವರು" ಎಂಬ ಭಾವನೆಗೆ ಹಾದಿ ಯನ್ನು ಮಾಡಿಕೊಡುತ್ತವೆ. ಈ ಭಾವನೆಯೇ ಕುಟುಂಬ ಜೀವನದ ತಳಹದಿಯಾಗುತ್ತದೆ. ಕುಟುಂಬ ಜೀವನವು ಮನು ಷ್ಯನನ್ನು ಜನಾಂಗ ಜೀವನದ ಸುಂದರ ಸೌಧದ ಬಳಿಗೆ ಎಳೆದು ತರುತ್ತದೆ. ಮುಂದಿನ ಸೋಪಾನವೇ ವಿಶ್ವಜೀವನ. ಅಂದು ವಿಶ್ವಜೀವನದ ಸವಿಗನಸು ನನ್ನ ಬುದ್ಧಿಯನ್ನು ಕೆಣಕು ತಲಿದ್ದಿತು. ಮಾನವರೆಲ್ಲ ಒಂದೇ ಕುಲದವರು ಎಂದೆಂಬ ಗುರಿಯನ್ನು ಸಾಧಿಸಲು ನನ್ನ ತೋಳುಗಳು ಉತ್ಸಾಹಗೊಂ ಡುವು. ವರ್ಗ ವರ್ಗಗಳಲ್ಲಿ ನೆಲಸಿದ ಭೇದ ಬುದ್ಧಿಯೆಂಬ ಕಳೆಗಳನ್ನು ಕಿತ್ತೊಗೆದು, ವಿಶ್ವಜೀವನವೆಂಬ ಚೂತಾಂಕುರ ವನ್ನು ನಾನು ನೆಟ್ಟೆ. ಮೇಲು ಕೀಳೆಂದು ಮಾನವನಲ್ಲಿ ಮೂ ಡಿದ ಭೇದಬುದ್ಧಿಯ ವಿಷವೃಕ್ಷದ ಬೇರುಗಳಿಗೆ ಕೊಡಲಿ ಪೆಟ್ಟು ಹಾಕಿದೆ. ನಾನು ನೆಟ್ಟ ಮರದ ನೆರಳನ್ನು ಎಲ್ಲರೂ ಆಶ್ರೈಸಿ, ದಣಿವಾರಿಸಲಿ;—ಹಣ್ಣುಗಳನ್ನು ಎಲ್ಲರೂ ಸವಿಯಲಿ ಎಂದು ಹಾರೈಸಿದೆ. ನನ್ನ ಕನಸು ನೆನಸಾಗಿದ್ದರೆ, ಮಾನವನು ದೇವತೆಗಳಿಗಿಂತಲೂ ಮಿಗಿಲೆನಿಸುತ್ತಿದ್ದ; ಇಳೆಯು ದೇವತೆ ಗಳ ನಾಡಿಗಿಂತಲೂ ಉತ್ತಮವೆನಿಸುತಿದ್ದಿತು. ಆದರೆ ನನ್ನ ಕಾಲಾನಂತರ ದೇವತೆಗಳು ಒಳಸಂಚನ್ನು ಹೂಡಿದರು. ನೆಲವು 'ದಿವ'ವಾಗುವುದನ್ನು ಕಂಡು ಅವರ ಬುದ್ಧಿಯು ಅಸೂಯಾ

ಕುಲವಾಯಿತು. ಸಾವು, ನೂರಾರು ಭೇದಗಳು, ಪಾಪ ಪುಣ್ಯಗಳು ಹೀಗೆ ನೂರಾರು ಸಂದುಗಳಲ್ಲಿ ತಮ್ಮ ನೂಲನ್ನು ಹೊಲಿದು ಅವರು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಿದ್ದರು; ಮಾನವನಿಗಿಂತಲೂ ಮಿಗಿಲು ತಾವೆಂದು ಹೆಮ್ಮೆ ತಳೆದಿದ್ದರು. ನನ್ನ ಮಾಳ್ಕೆಗಳಿಂದ ಅವರ ಕಾಲಡಿಯ ನೆಲವು ಕುಸಿಯುತ್ತಿದ್ದಿತು. ಅವರ ದಿವವು ಕಡಲಿನಾಳದಲ್ಲಿ ಮುಳುಗಿ ನೆಲೆವಿಡಿಯುವುದರಲ್ಲಿತ್ತು. ಮಾನವನು ತನ್ನ ಬುದ್ಧಿಬಲದಿಂದ, ಕಾರ್ಯದಕ್ಷತೆಯಿಂದ ದೇವತೆಗಳಿಗಿಂತಲೂ ಹೆಚ್ಚಿನ ಉನ್ನತಿಯನ್ನು ಸಾಧಿಸುವವನಿದ್ದ. ದಿಗಿಲುಗೊಂಡ ಸಗ್ಗಿಗರೂ ಅವರ ಕಿಂಕರರೂ ಒಳಸಂಚುಗೈದರು. ಮಾನವನನ್ನು ಮೃಗದ ಮೆಟ್ಟಲಿಗೆ ದೂಡುವ ಸನ್ನಣಗೈದರು.

“ಆದುದರಿಂದಲೇ, ವಿಷ್ಣು ವಾಮನಾವತಾರವನ್ನು ತಳೆದು ನಿನ್ನನ್ನು ಪಾತಾಳಕ್ಕೆ ಕಳುಹಿದನಲ್ಲವೇ?” ಕೃಷ್ಣಂಕುಟ್ಟಿ ನಡುವೆ ಬಾಯಿಹಾಕಿದ.

“ಶುದ್ಧ ಸಟೆ.” ಬಲಿಚಕ್ರವರ್ತಿ ತಲೆಯನ್ನು ಅಲುಗಿಸಿದ. “ವಿಷ್ಣುವಿನ ಮನ ಕಬಡುವಂತೆ ಆವ ಗೈಮೆಯನ್ನೂ ನಾನು ಎಸಗಲಿಲ್ಲ. ವಿಷ್ಣುವೇಕೆ ನನ್ನ ಮೇಲೆ ಮುನಿಸು ತಳೆಯಬೇಕು? ಇಳೆಯ ಪ್ರತಿಯೊಬ್ಬ ಮಾನವನೂ ನನ್ನಂತೆಯೇ ಆಗಲು ನಾನು ಪ್ರಯತ್ನಿಸಿದೆ. ಅರಿವಿನ ಸವಿಹಾಲನ್ನುಂಡು, ಅನುಭವಗಳೆಂಬ ಶಿಖರದ ತುತ್ತತುದಿಯನ್ನೇರಿ

ಜೀವನದ ಮಹಾ ಪ್ರವಾಹವನ್ನು ಪ್ರತಿಯೊಬ್ಬರೂ ನಿಟ್ಟಿಸ ಲೆಂದು ನಾನು ಹಾರೈಸಿದೆ. ಕುರಿಗಳು ಹುಲಿತೋಳಗಳ ಬಾಯ್ಗೆ ಉಣಿಸಾಗದಂತೆ ನೋಡಿಕೊಳ್ಳಲು ಕುರುಬನೊಬ್ಬ ನಿರುವಂತೆ, ಮಾನವನ ಬುದ್ಧಿ ಅರಳುವ ಮುನ್ನ ಅವನ ಹಿತರಕ್ಷಣೆಯ ಸಲುವಾಗಿ ಅರಸನೊಬ್ಬನು ಅಗತ್ಯವೆನಿಸು ತ್ತಾನೆ. ಶಿಶು ಬಳೆದು ಯುವಕನೆನಿಸಲು, ತಾಯ್ತಂದೆಯರ ಲಾಲನೆ ಪಾಲನೆಗಳು ಅನಗತ್ಯವೆನಿಸುವಂತೆ ಸಮಾಜವು ಪ್ರಬುದ್ಧಾವಸ್ಥೆಯನ್ನೈದಲು ಅರಸನ ರಾಜದಂಡವು ಅಗತ್ಯ ಬೀಳದು. ಎಂದು ಮಾತ್ರವಲ್ಲ ಈ ಅರಸೊತ್ತಿಗೆಯೇ ಸಮಾ ಜದ ಅಭಿವೃದ್ಧಿಗೆ ವಿಘಾತವೆನಿಸುವುದು. ಆದುದರಿಂದ ಅರ ಸೊತ್ತಿಗೆ ಆಡಳಿತಗಳಿಗೆ ಎಡೆಯಿಲ್ಲದ ಒಂದು ಸಮಾಜವನ್ನು ರಚಿಸುವುದು ನನ್ನ ಉದ್ದೇಶವಾಗಿದ್ದಿತು."

"ಇಂದು ನಾವು ನಾಗರಿಕತೆಯಲ್ಲಿ ಬಹು ಮುಂದುವರಿ ದಿದ್ದೇವೆ. ಆದರೂ ಆವ ಪರಿಯ ಆಳ್ಕೆಗೂ ಒಳಗಾಗದ ಒಂದು ಸಮಾಜದ ರಚನೆಯು ವಾಸ್ತವತೆಯ ರೂಪವನ್ನು ಹೊಂದಿಲ್ಲ." ಕೃಷ್ಣಂಕುಟ್ಟಿ ತನ್ನ ಮನಸ್ಸಿನ ಸಂಶಯವನ್ನು ಹೊರಗೆಡಹಿದ. "ಮತ್ಸರ, ದ್ವೇಷ, ಅಸಮತ್ವಗಳು ನೆರೆದಿಹ ಇಂದಿನ ಜನಾಂಗವು ಆಳ್ಕೆ ಮತ್ತು ಅರಸೊತ್ತಿಗೆಗಳನ್ನು ಕಿತ್ತೆಸೆಯಬಲ್ಲುದೇ?"

"ಏಕಾಗಬಾರದು?" ಆತ್ಮವಿಶ್ವಾಸದ ಎಳೆನಗೆಯು ಮು

ಹಾಬಲಿಯ ತುಟಿಗಳ ಮೇಲೆ ಮಿನುಗಿತು. "ಅರಸೊತ್ತಿಗೆ, ಆಳ್ಕೆಗಳು ಸಾವಿನ್ನೂ ಅಪರಿಷ್ಕೃತರಾಗಿದ್ದೇವೆಂಬುದರ ಗುರುತುಗಳು. ಮಾನವನು ತನ್ನ ತಿಳುವಿನಿಂದ ತನ್ನನ್ನು ತಾ ಸರಿತರೆ ಅವನಲ್ಲಿ ದ್ವೇಷ, ಅಸೂಯೆ, ಅಸಮತ್ವಗಳಿಗೆ ಎಡೆಯಿಲ್ಲ. ನಮ್ಮ ಜೀವನದಲ್ಲಿರುವಮೃಗಜೀವನದ ಕಿಲುಬುಗಳನ್ನು ಇಲ್ಲವಾಗಿಸಿದರೆ, ಜೀವನ ಪ್ರವಾಹವು ಪರಸ್ಪರ ವಿರುದ್ಧಗತಿಯನ್ನವಲಂಬಿಸದೆ, ಏಕಮುಖವಾಗಿ ಹರಿಯತೊಡಗುವುದು. ಅಂತಹ ಸಂದರ್ಭಗಳಲ್ಲಿ ಘರ್ಷಣೆಗಳಿಗೆ ಅವಕಾಶವಿಲ್ಲ. ಜೀವನದಲ್ಲಿ ತೋರಿಬರುವ ಅಸೂಯೆ, ದ್ವೇಷ, ಅಸಮತ್ವಗಳಿಗೆ ಆಯಾ ಕಾಲದ ಅರಸೊತ್ತಿಗೆ, ಆಳ್ಕೆಗಳೇ ಕಾರಣಗಳು. ಅರಸೊತ್ತಿಗೆ, ಆಳ್ಕೆಗಳು ತಮ್ಮ ದಿನಗಳು ಕೊನೆಗೊಳ್ಳುವುವು ಎಂಬುದನ್ನು ಬಲ್ಲವು. ಆದುದರಿಂದ ಜೀವನ ಪ್ರವಾಹವನ್ನು ಏಕಮುಖವಾಗಿ ಹರಿಯಲು ಬಿಡದೆ, ತಡೆ ತೊಡಕುಗಳನ್ನೊಡ್ಡಿ ಹತ್ತಾರು ಕಾಲುವೆಗಳಲ್ಲಿ ವಿಂಗಡಿಸಿ, ಜೀವನ ಶಕ್ತಿ ಸಮಾಜದ ಅಭ್ಯುನ್ನತಿಗೆ ಮಾರಕವಾಗುವಂತೆ ಅವು ಎಸಗುತ್ತವೆ."

*   *   *

"ಅಜ್ಜ, ನಿನ್ನಿಂದ ನಾಡನ್ನು ಕಸಿದುಕೊಳ್ಳಲು ಮಹಾವಿಷ್ಣು ವಾಮನಾವತಾರವನ್ನು ತಳೆಯಲಿಲ್ಲವೆ?" ಕೃಷ್ಣಂಕುಟ್ಟಿ ಬಲಿಯ ಮಾತುಗಳನ್ನು ಬೇರೊಂದು ದಾರಿಯಲ್ಲಿ ತಿರುಗಿಸಿದ.

"ಇಲ್ಲ. ನನ್ನ ಜೀವನದಲ್ಲಿ ದೈವವು ತನ್ನ ಬೆರಳುಗಳ

ನ್ನಾಡಿಸಲಿಲ್ಲ. ಅರಸೊತ್ತಿಗೆ ಆಳ್ಕೆಗಳಿಗೆ ಅವಕಾಶವಿಲ್ಲದ ಒಂದು ಮಾನವ ಸಮಾಜವನ್ನು ರಚಿಸುವುದರಲ್ಲಿ ನಾನು ಉದ್ಯುಕ್ತನಾಗಿದ್ದೆ. ನನ್ನ ಗೈಮೆಗೆ ತಕ್ಕಮಟ್ಟಿನ ಯಶಸ್ಸೂ ದೊರೆತಿದ್ದಿತು. ನನ್ನ ನಾಡಿನಿಂದ ದ್ವೇಷ, ಮತ್ಸರ, ಅಸಮತ್ವ ಗಳು ತೊಲಗಿದ್ದುವು. ಅರಿವಿನ ಕೈದೀವಿಗೆಯು ಜನತೆಗೆ ಜೀವ ನದ ಹೆದ್ದಾರಿಯಲ್ಲಿ ಬೆಳಕನ್ನು ಹರಹುತಿದ್ದಿತು. ನಾನು ಅರಸ ನೆನಿಸಿದರೂ ರಾಜದಂಡವನ್ನು ಕೈಯಲ್ಲಿ ಆಂತುಕೊಳ್ಳಬೇಕಾದ ಪ್ರಸಂಗವೇ ಒದಗಲಿಲ್ಲ. ಮುಂದಿನ ಹೆಜ್ಜೆಯನ್ನಿಡಬೇಕೆಂದು ಹವಣಿಸುತಿದ್ದಿತು ನನ್ನ ಮನವು. ಅಂತಹ ಸನ್ನಿವೇಶದಲ್ಲಿ ಬ್ರಾಹ್ಮಣ ವಟು ಒಬ್ಬನು ನನ್ನ ಬಳಿಗೆ ಬಂದ."

"ಬ್ರಾಹ್ಮಣ ವಟುವೆ!" ಆಶ್ಚರ್ಯೋದ್ಗಾರವು ಹೊರ ಸೂಸಿತು ಕೃಷ್ಣಂಕುಟ್ಟಿಯ ಕೊರಳಿಂದ.

"ಅಹುದು, ಹಿಂದೆ ನೀನು ಹೇಳಿದಂತೆ ಆತನ ಹೆಸರು ವಾಮನನೆಂದು. ಆದರೆ ಆತ ಮಹಾ ವಿಷ್ಣುವಿನ ಅವತಾರ ನಲ್ಲ; ಒಬ್ಬ ಸಾಮಾನ್ಯ ಬ್ರಾಹ್ಮಣ ವಟು. ಅವನು ನನ್ನ ಬಳಿಗೆ ಬಂದು ಒಂದು ವರವನ್ನು ಬೇಡಿದ; ತನಗೆ ಪೊಡವಿ ಯೊಡೆತನವನ್ನು ದಯೆಗೈಯಬೇಕೆಂದು. ಆ ಬಡ ಬ್ರಾಹ್ಮಣ ವಟುಗೆ ನನ್ನ ತೋಳ ಮೇಲಿನ ರಾಜದಂಡವನ್ನು ಆಂತು ಕೊಳ್ಳಬೇಕೆಂಬ ಬಯಕೆ ಹುಟ್ಟಿದ್ದಿತು. ನಾನೂ ಆಲೋಚಿಸಿದೆ. ಹೆಸರಿಗೊಬ್ಬ ಅರಸನು ನೆಲವನ್ನು ಆಳುತ್ತಿರಬೇಕು; ಜನತೆಯ

ಪ್ರಬುದ್ಧವೆನಿಸಿದರೆ ಅರಸೊತ್ತಿಗೆಯಿಲ್ಲದೆ ಜನಾಂಗವು ಬಾಳ ಬಲ್ಲುದು. ನಾನು ಅರಸುಗೈದರೂ,-ಈ ಬ್ರಾಹ್ಮಣ ವಟುವು ರಾಜದಂಡವನ್ನು ಕರದಲ್ಲಿ ಹಿಡಿದರೂ ಫಲವೊಂದೇ. ಗುಡಿಯಲ್ಲಿರುವ ಮೂರ್ತಿ ಯಾವ ಶಿಲೆಯದಾದರೇನು? ಭಾವುಕರ ಅಂತರಂಗಗಳಲ್ಲಿ ಭಕ್ತಿಯು ಸಲೆಯಿದ್ದರೆ ಸಾಕು. ನನ್ನ ಬದಲು ಈ ವಟು ರಾಜ್ಯಸೂತ್ರಗಳನ್ನು ಪಿಡಿಯಲಿ. ಈ ಪರಿವರ್ತನೆಯಿಂದ ಅರಸೊತ್ತಿಗೆಯು ವಂಶಪಾರಂಪರ್ಯವಾದುದು ಎಂಬ ಕಿಲುಬು ಅಳಿದುಹೋಗುವುದು. ಅರಸೊತ್ತಿಗೆಯೆಂಬುದು ಒಂದು ವಿಶಿಷ್ಟ ವರ್ಗದವರ ಹಕ್ಕಲ್ಲ. ದಕ್ಷತೆ, ಕಾರ್ಯಶಕ್ತಿ, ವಿಚಾರ ಸಂಪತ್ತುಗಳುಳ್ಳ ಪ್ರತಿಯೊಬ್ಬ ಮಾನವನಿಗೂ ಅದರ ಮೇಲೆ ಬಾಧ್ಯತೆಯಿದೆ. ತೇರಿನ ಹಗ್ಗಗಳನ್ನು ಹಿಡಿಯಲು ತವಕಗೊಂಡ ಬ್ರಾಹ್ಮಣ ವಟುವಿನ ಅವಕಾಶವನ್ನು ನಾನೇಕೆ ಇಲ್ಲವಾಗಿಸಬೇಕು? ನನ್ನ ಮಾಳ್ಕೆಗಳಿಂದ ಒಂದು ಹೊಸ ಸಂಪ್ರದಾಯವನ್ನು ಹೂಡಬೇಕು ಎಂದು ತೀರ್ಮಾನಿಸಿದೆ. ಆದುದರಿಂದ ಅರಸೊತ್ತಿಗೆಗೆ ಹೆಗಲು ಕೊಡಲು ಬಂದ ವಟುಗೆ ನಾನು ಓಲ್ಲೆನಲಿಲ್ಲ; ಅವನ ಬಯಕೆ ಸಲ್ಲದೆನಲಿಲ್ಲ. "ತಮ್ಮಾ, ಈ ನಾಡು ನನ್ನದೆನಿಸಿದಂತೆ ನಿನ್ನದೂ ಆಗಿದೆ. ಜನಾಂಗ ಜೀವನವನ್ನು ರೂಪಗೊಳಿಸಲು ನನಗೆ ಹಕ್ಕಿರುವಂತೆ ನಿನಗೂ ಇದೆ. ಆದುದರಿಂದ ನನ್ನ ಹೆಗಲ ಮೇಲಿನ ಹೊರೆಯನ್ನು ನೀನು ತೆಗೆದುಕೋ. ನನಗಿಂತಲೂ

ಮಿಗಿಲೆನಿಸಿದ ರೂವಾರಿ ನೀನಾಗು. ಬಳಲಿದೆನ್ನ ನಿಡುದೋಳು ಗಳಿಗೆ ನಾನು ವಿಶ್ರಾಂತಿಯನ್ನು ಈಯುತ್ತೇನೆ. ಪಾತಾಳಕ್ಕೆ ತೆರಳಿ ಅಲ್ಲಿ ಮಾನವ ಸಂಸ್ಕೃತಿಯ ಮೊಳಕೆಗಳನ್ನು ನೆಡು ತ್ತೇನೆ. ವರುಷಕ್ಕೊಮ್ಮೆ ಮೂರು ದಿನಗಳನಕ ಇಳೆಗೆ ಬಂದು ಈ ನಾಡಿನಲ್ಲಿ ಅಲೆದಾಡಿ, ನಿಮ್ಮ ಸೊಗದ ಬಾಳ್ಕೆಗಳನ್ನು ಕಂಡು ಕಣ್ಣುಗಳನ್ನು ತಣಿಸಿಕೊಳ್ಳುತ್ತೇನೆ.'' ಈ ಪರಿ ನಾನು ಆತನಿಗೆ ನುಡಿದು ಅರಸೊತ್ತಿಗೆಯ ಹೊರೆಯನ್ನು ಆತನ ಹೆಗಲ ಮೇಲೇರಿಸಿದೆ. ಅರಿಯದ ಹೊಸ ನಾಡಿನಲ್ಲಿ ಮಾನವ ಸಂಸ್ಕೃತಿಯ ದಿವ್ಯಪ್ರಭೆಯನ್ನು ಪಸರಿಸಲೋಸುಗ ನಾನು ಕೆಳಲೋಕವನ್ನು ಸೇರಿದೆ.

* * *

ಕೃಷ್ಣಂಕುಟ್ಟಿಯ ಮನದ ಸಂಶಯವು ನಿವಾರಣೆಯನ್ನು ಹೊಂದಲಿಲ್ಲ; ಆದುದರಿಂದ ಅವನು ಉಸುರಿದ. "ಅಜ್ಜ, ನಿನ್ನ ಎಸಕಗಳಿಂದ ದೇವತೆಗಳಿಗೆ ಅಸೂಯೆಯುಂಟಾಯಿ ತೆಂದು ಹೇಳಿದೆಯಲ್ಲ. ವಾಮನನಿಗೆ ಒಲಿದು ನೀನೆ ಪೊಡವಿ ಯನ್ನಿತ್ತೆಯಾದರೆ, ಅಲ್ಲಿ ಒಳಸಂಚಿಗೆಲ್ಲಿ ಎಡೆಯಿದೆ?"

"ಅಹುದು. ನಾನೇ ವಾಮನನಿಗೆ ನಾಡನ್ನು ನೀಡಿದೆ. ನಾನು ನೆಲದೊಡೆತನವನ್ನು ನೀಗಿದರೂ ನಾನು ನೆಟ್ಟ ಕುಡಿಯು ಮುರುಟಲಿಲ್ಲ. ಅದು ಒಂದು ದೊಡ್ಡ ಬಳ್ಳಿಯಾಗಿ ಕೆಲ ಕಾಲದಲ್ಲಿ ಹರಡಿತು. ಮಾನವ ಸಂಸ್ಕೃತಿಯೆಂಬ ಹಂದರದ

ನೆರಳಲ್ಲಿ ಮನುವಿನ ಮಕ್ಕಳು ತಮ್ಮ ಜಾತಿ ವರ್ಗಗಳ ವ್ಯತ್ಯಾಸಗಳನ್ನು ಮರೆತು ಒಂದಾದರು; ನನ್ನ ಕನಸುಗಳನ್ನು ನೆನಸಾಗಿಸುವ ಗೈಮೆಗಳನ್ನು ಅವರು ಕೈಗೊಂಡರು. ಆ ಪ್ರವಾಹವು ವಾಮನನ ಆಳಿಕೆಯಲ್ಲಿಯೂ ಮುಂದೆಯೂ ಹಲಗಾಲ ಮುಂದುವರಿದಿತು; ದೇವತೆಗಳ ಹೆಗ್ಗಳಿಕೆ ವೈಭವಗಳು ಮಾನವನ ಬಗೆಯಲ್ಲಿ ಮೂಡಿದ ಜ್ಞಾನಭಾಸ್ಕರನ ಮುಂದೆ ಮಿಂಚುಹುಳಗಳ ಪ್ರಭೆಯೆನಿಸಿತು. ಮಾನವನ ಉನ್ನತಿಯನ್ನು ಕಂಡು ಸ್ವರ್ಗದಾಳುಗಳಿಗೆ ಸಹನವಾಗಲಿಲ್ಲ. ಮಾನವನನ್ನು ಕೆಳ ಮೆಟ್ಟಲಿಗಿಳಿಸಲೋಸುಗ, ಅವನು ನಿರ್ಮಿಸಿದ ಸಂಸ್ಕೃತಿಯನ್ನು ತವಿಸಲೋಸುಗ ಅವರು ಯಾಜ್ಞಿಕರ ಮೂಲಕ ವಿಷಬೀಜಗಳನ್ನು ಇಳೆಗೆ ಕಳುಹಿಸಿದರು. ಅವರ ಕಿಂಕರರು ಈ ಇಳೆಯಲ್ಲಿ ಆ ವಿಷಬೀಜಗಳನ್ನು ನೆಟ್ಟು ಸೀರಿರಿದರು. ಅವು ಗಿಡವಾಗಿ ಹಣ್ಣುಗಳನ್ನು ಇತ್ತವು. ಆ ಹಣ್ಣುಗಳನ್ನು ಮೆದ್ದ ಮಾನವನು ತನ್ನ ದಿವ್ಯದೃಷ್ಟಿಯನ್ನು ಕಳೆದುಕೊಂಡ. ಮನುಷ್ಯ ಪ್ರಯತ್ನಕ್ಕಿಂತಲೂ ಅದೃಷ್ಟವಾದವು ಮಿಗಿಲೆನಿಸಿತು. ಮನುಷ್ಯನು ತನ್ನ ಶಕ್ತಿಯಲ್ಲಿ ವಿಶ್ವಾಸವನ್ನಿಡದೆ ದೈವದೆಡೆಗೆ ಮೊಗ ತಿರುಹಿದ; ಜನರಲ್ಲಿ ತಂಡಗಳು ಉದಿಸಿದುವು; ಒಂದಾಗಿದ್ದ ಮಾನವರು ಒಡೆದು ಬಣಗಳಾದರು. ದೇವತೆಗಳ ನಚ್ಚು ಒಲವುಗಳನ್ನು ಸಂಪಾದಿಸುವುದೇ ಜೀವನದ ಪರಮಾದರ್ಶವಾಯಿತು. ಮಾನವನು ಕೈಯಲ್ಲಿ ಹಿಡಿದಿದ್ದ ಪಂಜನ್ನು

ಬಿಸುಟು, ಮೂಢಭಕ್ತಿ, ಅಂಧ ವಿಶ್ವಾಸಗಳ ಕಗ್ಗವಿಯಲ್ಲಿ ತಾಣವನ್ನು ಹೊಂದಿದ. ದೈವದ ಹಿರಿಮೆಯನ್ನು ಸಾರಲೋಸುಗ ಗುಡಿಗೋಪುರಗಳನ್ನು ನಿರ್ಮಿಸಲು ಮಾನವನ ಬುದ್ಧಿ ಮತ್ತು ಕಲ್ಪನೆಗಳು ವೆಚ್ಚವಾದುವು. ಗುಡಿಗಳಲ್ಲಿ ಶಿಲಾಕೃತಿಯನ್ನು ತಳೆದ ದೇವನಾದರೂ ಮನುಷ್ಯನ ಹೃದಯ ಬುದ್ಧಿಗಳನ್ನು ಕಲ್ಲಾಗಿಸಿದ. ಮತ್ತೆ ಮಾನವನು ತನ್ನ ನೆಲೆಯನ್ನು ಬಿಟ್ಟು ಮೃಗಗಳ ಒಡನಾಡಿಯಾದ. ನಾನು ಕಂಡ ಕನಸು ಹುಸಿಯಾಯಿತು!"

"ಮಗೂ, ಅಂದು ನಿನ್ನ ಹಿರಿಯನು ಹಾಕಿದ ತಪ್ಪು ಹೆಜ್ಜೆಯು ನಿಮ್ಮನ್ನು ಯುದ್ಧಗಳೆಂಬ ಅಗ್ನಿಕುಂಡಗಳ ಬಳಿಗೆ ಕರೆತಂದಿದೆ." ಬಲಿಯ ಕಣ್ಣುಗಳಿಂದ ನೀರ ಹನಿಗಳೆರಡು ಉದುರಿದುವು. ಆತನ ಅಗಲವಾದ ಹಣೆಯ ಮೇಲೆ ಚಿಂತೆಯ ಗೆರೆಗಳು ಮೂಡಿದುವು.

"ಅಜ್ಜ, ನಮ್ಮ ಏಳಿಗೆಗೆ ದಾರಿಯೇ ಇಲ್ಲವೇ? ನಮ್ಮ ಕುದಿತಕ್ಕೆ, ನಮ್ಮ ಒಡಲುರಿಗೆ ಎಂದು ಕೊನೆ?" ಕೃಷ್ಣಂಕುಟ್ಟಿ ನಿಟ್ಟುಸಿರೊಂದನ್ನು ಬಿಟ್ಟು ಪ್ರಶ್ನಿಸಿದ.

"ಮಗೂ, ನಿಮ್ಮ ಸಂಕಟಗಳು ಆವಾಗ ಕೊನೆಗೊಳ್ಳುವುವು ಎಂದು ಹೇಳಲಿ! ಸೊಡರು ಉರಿಯದ ತನಕ ಕತ್ತಲೆಯು ಇದ್ದೇ ಇರುವುದು. ಆವಾಗ ಮಾನವನು ತನ್ನ ಬೀಳುಗಳನ್ನರಿತು ಸರಿಯಾದ ಅಡಿಗಳನ್ನಿರಿಸುವನೋ ಆಗಲೇ

ಅವನಿಗೆ ಬಿಡುಗಡೆ. ಒಳಗಿನ ಬೆಳಕು ಪ್ರಜ್ವಲಿಸಿ ತನ್ನ ಹೊಳಪನ್ನು ಬೀರುವ ತನಕ, ಸುತ್ತಲೂ ಕವಿದ ಕತ್ತಲೆಯು ಇಲ್ಲವಾಗದು. ಆದುದರಿಂದ ನಿಮ್ಮ ಆಗುಹೋಗುಗಳು ನಿಮ್ಮ ಕೈಗಳಲ್ಲಿಯೇ ಇವೆ."

ಕೃಷ್ಣಂಕುಟ್ಟಿಯು ಮಾತಾಡಲಿಲ್ಲ. ಹೊರಗಿನಿಂದ ಕುಳಿರ್ಗಾಳಿಯು ಬಂದು ಅವನ ಮೈಯನ್ನು ತೀಡಿತು. ಬಾನಿನಲ್ಲಿ ದೂರ ದೂರವಾಗಿ ನಿಂತಿದ್ದ ಚಿಕ್ಕೆಗಳು ಎಳೆನಗೆಯನ್ನು ಹೊರ ಚೆಲ್ಲಿದುವು.

"ಮಗೂ, ಸುಖ ಸಂತಸಗಳು ನಿಮ್ಮ ಪಾಲಿಗಿರಲಿ." ಬಲಿಯ ಕೊರಳಿಂದ ಕೊನೆನುಡಿಗಳು ಹೊಮ್ಮಿದುವು. "ಹಿಂದೆ ನಾನಾಳಿದ ನಾಡನ್ನು ಅಲೆದು ನೋಡುವೆನು. ಈ ದಿನಗಳಲ್ಲಿ ಕಣ್ಣುಗಳನ್ನು ತಣಿಪ, ಎದೆಯನ್ನು ಅರಳಿಪ ಸೊಗದ ನೋಟಗಳು ದೊರಕವು. ಜನರ ದುಃಖಮಯ ಬದುಕುಗಳನ್ನು ನೋಡಿ ಮರುಗುವೆನು. ನನ್ನ ಎದೆ ಕರಗಿ, ಕಂಗಳಿಂದ ಸೂಸಿದ ಕಂಬನಿವೊನಲಿಂದ ನೊಂದ ನೆಲದವ್ವನ ಒಡಲನ್ನು ತಣಿಸುವೆನು."

*　　*　　*

ಮರುದಿನ ಕೃಷ್ಣಂಕುಟ್ಟಿ ತಾನು ಮಹಾಬಲಿಯ ದರ್ಶನವನ್ನು ಪಡೆದ ಸುದ್ದಿಯನ್ನು ಕೈವಿಡಿದ ಮಡದಿಗೂ ಗೆಳೆಯರಿಗೂ ಉಸುರಿದ. ಆದರೆ ಅವರಾರೂ ಅದನ್ನು ನಿಜವೆಂದು

ನಂಬಲಿಲ್ಲ; ಕನಸೆಂದು ಪರಿಹಾಸಗೈದರು. ಆದರೆ ಅವನು ಮಾತ್ರ ಅದನ್ನು ಇಂದಿಗೂ ನಿಜವೆಂದೇ ನಂಬುತ್ತಾನೆ.

ವೀರರಾಜಪೇಟೆ,
೨—೧—೧೯೪೬.

ಭಾರತೀ ಸುತರ ಇತರ ಕೃತಿಗಳು

(1) ಕೊನೆಯ ದಿನಗಳು.

(2) ಕಾಲಯಾನ.

(3) ದೂರ ಹೋದಳು.

(4) ಸ್ವಾಧೀನ ಜೀವನ.

(5) ಅಮಾತ್ಯ ನಂದಿನಿ.

(6) ಸಾಧನ ಕುಟೀರ.

(7) ನನ್ನ ಅತ್ತಿಗೆ.

(8) ಸೆರೆಮನೆಯ ಗಣಪತಿ (ಅಚ್ಚಿನಲ್ಲಿ)

ಕುರಾನುಶೀಗಾನಿ